## **ಕರ್ನಾಟಕ ಅರಣ್ಯ ಇಲಾಖೆ**

(ಕರ್ನಾಟಕ ಅರಣ್ಯಗಳ ನಿಯಮಾವಳಿ, 1969)

ನಮೂನೆ 45 [ನಿಯಮ 127ಎ (2)]

**(ಅರ್ಜಿ ನಮೂನೆ)**

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
.... .... .... .... .... .... .... ....
.... .... .... .... .... .... .... ....
.... .... .... .... .... .... .... ....

ಮಾನ್ಯರೇ,

______________ಜಿಲ್ಲಾ, ______________ತಾಲ್ಲೂಕು, ___________ಹಳ್ಳಿಯ, ___________ಸಂಖ್ಯೆಯ ನಿವೇಶನದ ಮಾಲೀಕ/ಮಾಲೀಕರಾದ ನಾನು/ನಾವು ಮೇಲೆ ಕಾಣಿಸಲಾದ ನಿವೇಶನದಲ್ಲಿ/ಗಳಲ್ಲಿ ವಾಸವಾಗಿದ್ದು, ಇದರಲ್ಲಿ ಉತ್ಪತ್ತಿಯಾದ ಮರಮುಟ್ಟುಗಳನ್ನು ಅರಣ್ಯ ಇಲಾಖೆಯಿಂದ ನಿಗದಿಪಡಿಸಿರುವ ಬೆಲೆಗೆ ನಿಮ್ಮಿಂದ ನಿರ್ದೇಶಿಸಲ್ಪಟ್ಟ ಡಿಪೋಗಳಲ್ಲಿ ಸರ್ಕಾರಕ್ಕೆ ಮಾರುತ್ತಿದ್ದೇನೆ/ವೆ. ನಾನು/ನಾವು ಸದರೀ ಭೂಮಿಯ ಮೇಲಿರುವ ಹಕ್ಕನ್ನು ದೃಡೀಕರಿಸಲ್ಪಟ್ಟ ಕಂದಾಯ ದಾಖಲೆಗಳ ಪ್ರತಿಗಳು ಮತ್ತು ಭೂದಾಖಲೆಗಳ ಸಹಾಯಕ ಅಧೀಕ್ಷಕರಿಂದ ದೃಢೀಕರಿಸಪ್ಪಟ್ಟ ಸರ್ವೇ ಸ್ಕೆಚ್ ಮುಂತಾದ ಈ ಕೆಳಕಂಡ ವಿವರಗಳನ್ನು ಅವಗಾಹನೆಗಾಗಿ ಮುಂದಿನ ಕ್ರಮಕ್ಕಾಗಿ ಒದಗಿಸಲಾಗಿದೆ.

1. ನಿವೇಶನ ಸಂಖ್ಯೆಗಳು ಮತ್ತು ವಿಸ್ತೀರ್ಣ ಎಕರೆಗಳಲ್ಲಿ.
2. ನಿವೇಶನ ಸಂಖ್ಯೆಗಳನ್ನು ಗುರುತಿಸಿರುವ ಸರ್ವೇ ಸ್ಕೆಚ್.
3. ನಿವೇಶನಗಳ ಗಡಿಗಳು ಸ್ಪಷ್ಟವಾಗಿದೆಯೇ ಮತ್ತು ಭೂಮಿಯ ಮೇಲೆ ಸರಿಯಾಗಿ ಗುರುತಿಸಲ್ಪಟ್ಟಿದೆಯೇ?
4. ನಿವೇಶನದಲ್ಲಿರುವ ಬೀಟೆ ಮರಗಳ ಸಂಖ್ಯೆ.
5. ಕತ್ತರಿಸಿ ಸರ್ಕಾರಕ್ಕೆ ಮಾರಲು ಉದ್ದೇಶಿಸಿರುವ ಬೀಟೆ ಮರಗಳ ಸಂಖ್ಯೆ (ಭೂಮಟ್ಟದಿಂದ 4 ಅಡಿ ಎತ್ತರದ ಸುತ್ತಳತೆಯ ಮರಗಳ ಪಟ್ಟಿ).
6. ಭೂದಾಖಲೆಗಳ ಸಹಾಯಕ ಅಧೀಕ್ಷಕರವರಿಂದ ದೃಢೀಕರಸಲ್ಪಟ್ಟ ಕತ್ತರಿಸಬೇಕಾದ ಬೀಟೆ ಮರಗಳನ್ನು ಗುರುತಿಸಿರುವ ನಿವೇಶನಗಳ ಸರ್ವೇ ಸ್ಕೆಚ್.
7. (ಅ) ಗೇಣಿಯ ಹಕ್ಕು (ಹಿಡುವಳಿ, ದರಖಾಸ್ತು, ಬೋಗ್ಯ, ಕಾಫಿ, ಏಲಕ್ಕಿ ಮಲಾಯಿ, ಬಾನೆ, ಇತ್ಯಾದಿ ಮತ್ತು ಬಿಡಿಸಿಕೊಂಡಿರುವುದು ಅಥವಾ ಬಿಡಿಸಿಕೊಳ್ಳದಿರುವುದು).

   (ಆ) ಭೂಮಿಯ ಹಕ್ಕು (ದಾನವಾಗಿ ಪಡೆದ ವರ್ಷ ಅಥವಾ ಸ್ವಾಧೀನ ಪಡಿಸಿಕೊಂಡ ವರ್ಷ ಮತ್ತು ಮಾಲೀಕನಿಂದ ನಿರಂತರವಾಗಿ ಅನುಭೋಗಿಸಿದ ಅವಧಿ).

   (ಇ) ಕತ್ತರಿಸಬೇಕೆಂದಿರುವ ಬೀಟೆ ಮರಗಳ ಮೇಲಿನ ಹಕ್ಕು (ಹಕ್ಕು ಇರುವ ಬಗ್ಗೆ ದಾಖಲೆ)

(ಈ) ಕಂದಾಯ ದಾಖಲೆಗಳಲ್ಲಿ ಯಾವುದಾದರೂ ಬೀಟೆ ಮರಗಳು ಸರ್ಕಾರಕ್ಕಾಗಿ ಮೀಸಲಾಗಿದೆಯೇ.

(ಉ) ಬೀಟೆ ಮರಗಳ ಮೌಲ್ಯವನ್ನು ಪಾವತಿಸುವುದು. ಈ ಹಿಂದೆ ದರಕಾಸ್ತು ವ್ಯಾಜ್ಯಗಳಲ್ಲಿ ಸಂದಾಯ ಮಾಡಿದ ಬೆಲೆ ಅಥವಾ ಕೊಡಗು ಜಿಲ್ಲೆಯ ಗೇಣಿ ವ್ಯಾಜ್ಯಗಳಲ್ಲಿ ಬಿಡಿಸಿಕೊಂಡಿರುವುದು.

(ಊ) ಸರ್ಕಾರದ ಸುತ್ತೋಲೆ ಆದೇಶ ಸಂಖ್ಯೆ: ಆರ್‌ಡಿ 10 ಎಲ್‌ಜಿಯು 73, ದಿನಾಂಕ 4ನೇ ಜೂನ್ 1973 ರ ಮೇರೆಗೆ ಉಪ ಕಮೀಷನರ್ ಅಥವಾ ಸಹಾಯಕ ಕಮೀಷನರ್‌ರವರಿಂದ ದೃಢೀಕರಿಸಲ್ಪಟ್ಟ ಪ್ರಮಾಣ ಪತ್ರದೊಂದಿಗೆ ಕಂದಾಯ ದಾಖಲೆಗಳು.

8. ಆಸ್ತಿಯಲ್ಲಿ ಅಥವಾ ಮರಗಳಲ್ಲಿ ಪಾಲುದಾರಿಕೆಯಿದ್ದರೆ ಇತರೇ ಮಾಲೀಕರ ಅನುಮತಿ.
9. ಬೀಟೆ ಮರಗಳನ್ನು ಕತ್ತರಿಸುವುದಕ್ಕೆ ಕಾರಣಗಳು.
10. ಕತ್ತರಿಸಲು ಉದ್ದೇಶಿಸಿರುವ ಮರಗಳ ಸ್ಥಳದಲ್ಲಿಯೇ ಬೀಟೆ ಮರಗಳನ್ನು ಕಡ್ಡಾಯವಾಗಿ ಪುನರುಜ್ಜೀವನಗೊಳಿಸುತ್ತೇನೆಂದು ನಾನು/ನಾವು ಒಪ್ಪಿ ಸೂಚಿಸಿದ ಅವಧಿ.
11. ಕತ್ತರಿಸಲು ಉದ್ದೇಶಿಸಿರುವ ಮರಗಳ ಸ್ಥಳದಲ್ಲಿಯೇ ಬೀಟೆ ಮರಗಳನ್ನು ಕಡ್ಡಾಯವಾಗಿ ಪುನರುಜ್ಜೀವನಗೊಳಿಸುತ್ತೇನೆಂದು ನಾನು/ನಾವು ಒಪ್ಪಿ ಸೂಚಿಸಿದ ಕ್ರಮ.

ಆದುದರಿಂದ ನಾನು/ನಾವು ಇಲಾಖೆಯಿಂದ ಬೀಟೆ ಮರಗಳನ್ನು ಕತ್ತರಿಸಲು ಮತ್ತು ತೆಗೆಯಲು ಹಾಗೂ ನಿಮ್ಮಿಂದ ನಿಗದಿಪಡಿಸಿದ ಡಿಪೋಗಳಲ್ಲಿ ಸರ್ಕಾರಕ್ಕೆ ಮಾರಲು ಅನುಮತಿಯನ್ನು ಕೋರುತ್ತಿದ್ದೇವೆ.

ಅನುಮತಿ ದೊರೆತ ನಂತರ ನಾನು/ನಾವು ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಅವರಿಂದ ಅಧಿಕೃತವಾಗಿ ನಿಯಮಿಸಲ್ಪಟ್ಟ ಬೇರೆ ಯಾವುದೇ ಅಧಿಕಾರಿಗಳಿಗೆ ತನಿಖೆಯಲ್ಲಿ ಅಗತ್ಯವಾದ ಮತ್ತು ಹಕ್ಕಿನಿಂದ ಕೇಳಿದ ಇತರೆ ವಿವರಗಳನ್ನು ಒದಗಿಸಲು ಹಾಗೂ ಈ ಬಗ್ಗೆ ತನಿಖೆಯಲ್ಲಿ ಅವರ ಕರ್ತವ್ಯಗಳನ್ನು ನಿರ್ವಹಿಸಲು ಮತ್ತು ಮುಂದಿನ ಕ್ರಮಕ್ಕೆ ಕಳುಹಿಸಲು ಸಹಕರಿಸುತ್ತೇನೆ/ವೆ.

ಕತ್ತರಿಸಲು ಉದ್ದೇಶಿಸಿರುವ ಬೀಟೆ ಮರಗಳನ್ನು ಕತ್ತರಿಸಲು ಮತ್ತು ತೆಗೆಯುವ ಒಪ್ಪಿಗೆ ನೀಡುವ ಸಂಧರ್ಭದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೊರಿಸುವ ನಿಯಮಗಳನ್ನು ನಾನು/ನಾವು ಒಪ್ಪಿರುತ್ತೇನೆ/ವೆ.

ಸ್ಥಳ: ತಮ್ಮ ವಿಶ್ವಾಸಿ,
ದಿನಾಂಕ: